**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ**

ಸಿ.ಸಿ. ನಂ.20/2022

PW-2

| | | |
|---|---|---|
| ಹೆಸರು | :- | ಕೇಶವಮೂರ್ತಿ |
| ತಂದೆ ಹೆಸರು | :- | ಯಲ್ಲಪ್ಪ |
| ವಯಸ್ಸು | :- | 52 ವರ್ಷ |
| ವೃತ್ತಿ | :- | ಎ.ಎಸ್.ಐ., ಬಿಡದಿ ಪೊಲೀಸ್ ಠಾಣೆ |
| ವಾಸ ಸ್ಥಳ | :- | ಬಿಡದಿ |
| ದಿನಾಂಕ | :- | 28.11.2024. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-

ನಾನು ಬಿಡದಿ ಪೊಲೀಸ್ ಠಾಣೆ ಕಳೆದ ಎರಡೂವರೆ ವರ್ಷಗಳಿಂದ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ಈ ನ್ಯಾಯಾಲಯದ ಆದೇಶದಂತೆ ದಿನಾಂಕ 21.07.2023 ರಂದು ನಾನು ಆರೋಪಿತನ ವಿರುದ್ಧ ಹೊರಡಿಸಲಾದ ಸಿ.ಸಿ ನಂ.20/2022 ರಲ್ಲಿ ಉದ್ಘೋಷಣೆಯನ್ನು ಜಾರಿಗೊಳಿಸಲು ಬೈರಮಂಗಲ ಹೋಬಳಿಯ ಮತದಬೈಲು ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿ ಗ್ರಾಮಸ್ಥರನ್ನು ವಿಚಾರಣೆ ಮಾಡಿರುತ್ತೇನೆ. ಆಗ ಆರೋಪಿ ಅಜಯ್‌ಕುಮಾರ್ ತನ್ನ ವಿಳಾಸದ ಮನೆಯನ್ನು ಬಿಟ್ಟುಹೋಗಿದ್ದು, ಅವರ ಮಾಹಿತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಚಲುವರಾಜು ಮತ್ತು ಬಸವರಾಜು ಎಂಬ ಪಂಚರನ್ನು

ಬರಮಾಡಿಕೊಂಡು ಆರೋಪಿಯ ಮನೆಯ ಮುಂದೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರನ್ನು ಬೆಳಗ್ಗೆ **11.00** ರಿಂದ **12.00** ಗಂಟೆಯ ನಡುವೆ ಜರುಗಿಸಿರುತ್ತೇನೆ. ಉದ್ಘೋಷಣೆ ಪತ್ರವನ್ನು ಆರೋಪಿಯ ಮನೆಯ ಮೇಲೆ ಹಾಗೂ ಸಾರ್ವಜನಿಕ ಬಸ್ ನಿಲ್ದಾಣದಲ್ಲಿ ಅಂಟಿಸಿ, ಶ್ರೀನಿವಾಸ್ ಎಂಬುವವರ ಮೂಲಕ ಟಾಂ ಟಾಂ ಹೊರಡಿಸಿ ಆರೋಪಿ ಪತ್ತೆಯಾದಲ್ಲಿ ದಿನಾಂಕ **24.08.2023** ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿರುತ್ತೇನೆ.

**3.** ನಂತರ ಅದೇ ದಿನ ಆರೋಪಿಯ ಚರ ಮತ್ತು ಸ್ಥಿರ ಆಸ್ತಿಯ ಬಗ್ಗೆ ಮಾಹಿತಿ ಕೋರಿ ಪಿ.ಡಿ.ಓ. ಬೈರಮಂಗಲ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿರುತ್ತೇನೆ. ಸದರಿಯವರು ದಿನಾಂಕ **31.07.2023** ರಂದು ಆರೋಪಿಯ ಹೆಸರಿನಲ್ಲಿ ಯಾವುದೇ ಸ್ಥಿರ ಆಸ್ತಿ ಕಂಡು ಬಂದಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ನಾನು ತಯಾರಿಸಿದ ಮಹಜರನ್ನು **ನಿಪಿ-6** ಎಂದು, ಅದರಲ್ಲಿನ ನನ್ನ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಿರುತ್ತೇನೆ. ನಾನು ಬೈರಮಂಗಲ ಗ್ರಾಮ ಪಂಚಾಯಿತಿಯ ಪಿ.ಡಿ.ಓ ರವರಿಗೆ ಸಲ್ಲಿಸಿದ ಮನವಿಯನ್ನು **ನಿಪಿ-7** ಎಂದು, ಅದರಲ್ಲಿನ ನನ್ನ ಸಹಿಯನ್ನು **ನಿಪಿ-7(ಎ)** ಎಂದು ಹಾಗೂ ಪಿ.ಡಿ.ಓ ರವರು ಸಲ್ಲಿಸಿದ ವರದಿಯನ್ನು ಈಗ ಸಲ್ಲಿಸುತ್ತಿದ್ದು ಅದನ್ನು ನಿಪಿ-**8** ಎಂದು ಗುರುತಿಸಿರುತ್ತೇನೆ.

**4.** ನಂತರ ಅದೇ ದಿನ ಬೆಂಗಳೂರು ಕೆಂಗೇರಿ ಹೋಬಳಿಯ ಬಂಡೇಮಠ ಗ್ರಾಮಕ್ಕೆ ಭೇಟಿ ನೀಡಿ ಅಲ್ಲಿ ಗ್ರಾಮಸ್ಥರನ್ನು ವಿಚಾರಣೆ ಮಾಡಿರುತ್ತೇನೆ. ಆಗ ಆರೋಪಿ ಅಜಯ್‌ಕುಮಾರ್ ತನ್ನ ವಿಳಾಸದ

ಮನೆಯನ್ನು ಬಿಟ್ಟುಹೋಗಿದ್ದು, ಅವರ ಮಾಹಿತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ತಮ್ಮಯ್ಯ ಮತ್ತು ನರಸಿಂಹಮೂರ್ತಿ ಎಂಬ ಪಂಚರನ್ನು ಬರಮಾಡಿಕೊಂಡು ಆರೋಪಿಯು ವಾಸವಿದ್ದ ಬಾಡಿಗೆ ಮನೆ ಮತ್ತು ಬಂಡೇಮಠದ ನಾಮಫಲಕ ಇರುವ ಕಂಬಕ್ಕೆ ಉದ್ಘೋಷಣ ಪತ್ರವನ್ನು ಅಂಟಿಸಿ, ಶ್ರೀನಿವಾಸ್ ಎಂಬುವವರ ಮೂಲಕ ಟಾಂ ಟಾಂ ಹೊರಡಿಸಿ ಆರೋಪಿ ಪತ್ತೆಯಾದಲ್ಲಿ ದಿನಾಂಕ **24.08.2023** ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿರುತ್ತೇನೆ. ಮಹಜರನ್ನು ಮಧ್ಯಾಹ್ನ **3.00** ರಿಂದ **4.00** ಗಂಟೆಯ ನಡುವೆ ಜರುಸಿರುತ್ತೇನೆ.

**5.** ನಂತರ ಅದೇ ದಿನ ಆರೋಪಿಯ ಚರ ಮತ್ತು ಸ್ಥಿರ ಆಸ್ತಿಯ ಬಗ್ಗೆ ಮಾಹಿತಿ ಕೋರಿ ಮುಖ್ಯಾಧಿಕಾರಿಗಳು, ಬಿ.ಬಿ.ಎಂ.ಪಿ., ಕಛೇರಿ, ಕೆಂಗೇರಿ ಉಪನಗರ ಇವರಿಗೆ ಮನವಿ ಸಲ್ಲಿಸಿರುತ್ತೇನೆ. ಮಹಜರನ್ನು **ನಿಪಿ-9** ಎಂದು, ಅದರಲ್ಲಿನ ನನ್ನ ಸಹಿಯನ್ನು **ನಿಪಿ-9(ಎ)** ಎಂದು, ಮುಖ್ಯಾಧಿಕಾರಿಗಳು, ಬಿ.ಬಿ.ಎಂ.ಪಿ., ಕಛೇರಿ, ಕೆಂಗೇರಿ ಉಪನಗರ ಇವರಿಗೆ ಸಲ್ಲಿಸಿದ ಮನವಿಯನ್ನು **ನಿಪಿ-10** ಎಂದು, ಅದರಲ್ಲಿನ ನನ್ನ ಸಹಿಯನ್ನು ನಿಪಿ-**10(ಎ)** ಎಂದು ಗುರುತಿಸಿರುತ್ತೇನೆ. ಬಂಡೇಮಠದ ಬಸ್ ನಿಲ್ದಾಣದ ಬಳಿ ಉದ್ಘೋಷಣಾ ಪತ್ರವನ್ನು ಅಂಟಿಸಿದ ಫೋಟೋವನ್ನು **ನಿಪಿ-11** ಎಂದು, ಮಠದಬೈಲಿನಲ್ಲಿ ಆರೋಪಿಯ ಮನೆಯ ಬಳಿ ಉದ್ಘೋಷಣಾ ಪತ್ರವನ್ನು ಅಂಟಿಸಿದ ಫೋಟೋವನ್ನು **ನಿಪಿ-12** ಎಂದು, ನನ್ನ ಸಹಿಯನ್ನು ನಿಪಿ-**12(ಎ)** ಎಂದು, ಉದ್ಘೋಷಣಾ ಪತ್ರವನ್ನು ಆರೋಪಿಯು ವಾಸವಿದ್ದ ಬಾಡಿಗೆ ಮನೆಯಲ್ಲಿ ಅಂಟಿಸಿದ ಫೋಟೋವನ್ನು **ನಿಪಿ-13** ಎಂದು, ಉದ್ಘೋಷಣಾ ಪತ್ರವನ್ನು ಬಂಡೇಮಠದ ನಾಮಫಲಕ ಇರುವ ಬಗ್ಗೆ ಅಂಟಿಸಿದ ಫೋಟೋವನ್ನು

**ನಿಪಿ-14** ಎಂದು ಗುರುತಿಸಿರುತ್ತೇನೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.